ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 590 (633) |
| ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ವಿಷಯ | ನವೋದಯ ಆಪ್ ನಲ್ಲಿರುವ ತಾಂತ್ರಿಕ ದೋಷಗಳನ್ನು ಸರಿಪಡಿಸುವ ಕುರಿತು. |
| ಉತ್ತರಿಸಬೇಕಾದ ದಿನಾಂಕ | 12/07/2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |
| ಪ್ರಶ್ನೆ | ಉತ್ತರ |
| ಅ) ರಾಜ್ಯದಲ್ಲಿ ಫಲಾನುಭವಿಗಳ ಖಾತೆಗೆ ನೇರವಾಗಿ ಪಿಂಚಣಿ ಜಮಾ ಮಾಡಲು ನವೋದಯ ಆಪ್ ಬಂದ ಬಳಿಕವು ಈ ತಂತ್ರಾಂಶಕ್ಕೆ ಅಗತ್ಯ ದಾಖಲೆಗಳನ್ನು ಅಪ್ ಲೋಡ್ ಮಾಡಲು ಸಾಕಷ್ಟು ತಾಂತ್ರಿಕ ಸಮಸ್ಯೆಗಳು ಎದುರಾಗುತ್ತಿರುವುದರಿಂದ ಸಾವಿರಾರು ಅರ್ಹ ಫಲಾನುಭವಿಗಳು ಸಾಮಾಜಿಕ ಭದ್ರತಾ ಯೋಜನೆಗಳ ಮಾಸಿಕ ಪಿಂಚಣಿಯಿಂದ ಹೊರಗುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br>ಆ) ಬಂದಿದ್ದಲ್ಲಿ, ಈ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ ಅರ್ಹ ಫಲಾನುಭವಿಗಳಿಗೆ ಮಾಸಿಕ ಪಿಂಚಣಿ ದೊರಕುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ನಾಗರೀಕರ ಆದಾಯ ಹಾಗೂ ವಯೋಮಿತಿ ಆಧಾರದ ಮೇಲೆ ಸ್ವಯಂ ಪ್ರೇರಿತವಾಗಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅರ್ಜಿ ರಹಿತವಾಗಿ ಮನೆ ಬಾಗಿಲಿಗೆ ಪಿಂಚಣಿ ಸೌಲಭ್ಯ ತಲುಪಿಸುವ "ಮನೆ ಬಾಗಿಲಿಗೆ ಮಾಸಾಶನ" ಅಭಿಯಾನವನ್ನು 2020-21 ರಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.<br>ಮೇಲ್ಕಂಡ ಯೋಜನೆಗಳಡಿ ಫಲಾನುಭವಿಗಳ ಭೌತಿಕ ಪರಿಶೀಲನೆಗಾಗಿ ನವೋದಯ ಮೊಬೈಲ್ ಆಪ್ ಅಭಿವೃದ್ಧಿ ಪಡಿಸಲಾಗಿದೆ. ಸದರಿ ಮೊಬೈಲ್ ಆಪ್ ಬಳಸಿ ಫಲಾನುಭವಿಗಳ ಮಾಹಿತಿ ಸಂಗ್ರಹಣೆ ಮಾಡಿ ಭಾವಚಿತ್ರ ಹಾಗೂ ಬ್ಯಾಂಕ್/ ಅಂಚೆ ಖಾತೆ ಮಾಹಿತಿ ಪಡೆದು ತಿಳುವಳಿಕೆ ಪತ್ರ ನೀಡಿ ಮನೆ ಬಾಗಿಲಿಗೆ ಮಂಜೂರಾತಿ ಆದೇಶ ವಿತರಿಸಿ ಪಿಂಚಣಿ ಪಾವತಿಸಲಾಗುತ್ತಿದೆ.<br>ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶ (Family Database) ದೊಂದಿಗೆ ಪಿಂಚಣಿ ದತ್ತಾಂಶ ಇಂದೀಕರಣಗೊಳಿಸಿ ಇದರ ಮೂಲಕ ವಯಸ್ಸು, ಕೃಷಿ ಭೂಮಿ ಮಾಲಿಕತ್ವ, ಆದಾಯ ಹಾಗೂ ಇನ್ನಿತರ ಲಭ್ಯ ನಿಯತಾಂಕಗಳ (Parameters) ಆಧಾರದ ಮೇಲೆ ಸ್ವಯಂ ಪ್ರೇರಿತವಾಗಿ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದ್ದು, ಇದುವರೆವಿಗೆ 65659 ಫಲಾನುಭವಿಗಳಿಗೆ ಈ ಯೋಜನೆಯಡಿ ಸೌಲಭ್ಯ ವಿತರಿಸಲಾಗಿದೆ.<br>ತಾಲ್ಲೂಕು/ಹೋಬಳಿ/ ಗ್ರಾಮ ರಚನೆಯಾದಂತೆ ನಾಡಕಛೇರಿ ತಂತ್ರಾಂಶದಲ್ಲಿ ನವೀಕರಿಸಿದಂತೆಯೇ ನವೋದಯ ತಂತ್ರಾಂಶದಲ್ಲಿಯೂ ಸಹ ಮ್ಯಾಪಿಂಗ್ ಮಾಡಿಕೊಂಡು ಪಿಂಚಣಿ ಪಾವತಿಸಲು ಕ್ರಮವಹಿಸಲಾಗುತ್ತಿದೆ. Mobile GPS Error, Photo Capturing Error, VA/Village mapping Error ಮುಂತಾದ ತಾಂತ್ರಿಕ ಸಮಸ್ಯೆಗಳು ಎದುರಾದಾಗ ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಪ್ರತ್ಯೇಕವಾಗಿ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಎಲ್ಲಾ ಸಮಸ್ಯೆಗಳನ್ನು ಆಗಿಂದಾಗ್ಗೆ ಸರಿಪಡಿಸಿ ಫಲಾನುಭವಿಗಳಿಗೆ ಪಿಂಚಣಿ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br>ಪ್ರಸ್ತುತ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಸಮಗ್ರ ವಾರ್ಷಿಕ ಭೌತಿಕ ಪರಿಶೀಲನಾ ಕಾರ್ಯವನ್ನು ಸಹ Navodaya Mobile App ಮೂಲಕ ಕ್ರಮವಹಿಸಲಾಗುತ್ತಿದೆ. ಇದುವರೆವಿಗೆ 6689116 ಫಲಾನುಭವಿಗಳ ಮಾಹಿತಿಯನ್ನು ನವೋದಯ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಈ ಪೈಕಿ 5769314 ಫಲಾನುಭವಿಗಳ ಪಿಂಚಣಿಯ ಮಾಹಿತಿಯನ್ನು ಸಂಬಂಧಪಟ್ಟ ಗ್ರಾಮಲೆಕ್ಕಿಗರು ಅಪ್ ಡೇಟ್ ಮಾಡಿದ್ದು, ಅದರಂತೆ ಪಿಂಚಣಿ ದತ್ತಾಂಶದಲ್ಲಿ ಇಂದೀಕರಿಸಲಾಗಿರುತ್ತದೆ. |

ಸಂಖ್ಯೆ:ಡಿಎಸ್‌ಎಸ್ ಪಿ/ಎಲ್ ಸಿಕ್ಯೂ/13/2023

(ಕೃಷ್ಣ ಭೈರೇಗೌಡ)
ಕಂದಾಯ ಸಚಿವರು